ಇಡೀ ದಿನ ಇಂಗ್ಲಿಷ್‌ನಲ್ಲಿದ್ದ ಬೋದಿಲೇರನ ಪದ್ಯಗಳನ್ನು ಓದಿಸಿದ್ದರು. ಇದೆಲ್ಲ ನಾನು ಏಕಕಾಲದಲ್ಲಿ ಒಬ್ಬ ಬರಹಗಾರನಾಗಿ, ಹೋರಾಟಗಾರನಾಗಿ ಬೆಳೆಯಲು ದೊಡ್ಡ ಮಟ್ಟದಲ್ಲಿ ನೆರವಾಯಿತು. ಮುಂದೆ ಇವುಗಳ ಜೊತೆಗೆ ಸಂಸ್ಕೃತಿ ಚಿಂತನೆ ಹಾಗೂ ಪತ್ರಿಕೋದ್ಯಮಗಳೂ ಕೂಡ ನನ್ನ ಬದುಕಿಗೆ ಸೇರ್ಪಡೆಯಾದವು. ನನ್ನ ಬದುಕಿನ ಬಹು ಮುಖ್ಯವಾದ ಘಟ್ಟಗಳು ಇವೇನೇ.

◆ **ನಿಮ್ಮ ಪತ್ರಿಕೋದ್ಯಮದ ಅನುಭವ ಕುರಿತು ಹೇಳಿ...**

ಅದು ಆರಂಭವಾಗಿದ್ದು ಹೀಗೆ; ಆಗ ಕೋಲಾರದಲ್ಲಿ ನಾವು ದೊಡ್ಡ ಮಟ್ಟದ ಹೋರಾಟಗಳನ್ನು ಸಂಘಟಿಸುತ್ತಿದ್ದೆವು. ಅದರ ಬಗ್ಗೆ ನಾವೇ ಬರೆದು ಕಳಿಸಿದರೂ ಪತ್ರಿಕೆಗಳಲ್ಲಿ ಒಂದೆರಡು ಸಾಲಿನ ಸುದ್ದಿ ಮಾತ್ರ ಪ್ರಕಟವಾಗುತ್ತಿತ್ತು. ಪತ್ರಿಕೆಗಳು ಮುಖ್ಯವಾದ ವಿಚಾರಗಳತ್ತ ಗಮನ ಕೊಡದೇ ಅನಗತ್ಯ ಸುದ್ದಿಗಳನ್ನು ಹೆಚ್ಚು ಪ್ರಕಟಿಸುತ್ತಾ ಇದ್ದವು. ಜೊತೆಗೆ ಅವುಗಳ ಭಾಷೆ, ಶೈಲಿ ಯಾವುದೂ ನಮ್ಮದಲ್ಲವಲ್ಲ ಅನ್ನಿಸಿ, ನಾವೇ ಯಾಕೆ ಪತ್ರಿಕೆ ಮಾಡಬಾರದು ಎಂದು ನಾವೊಂದಷ್ಟು ಜನ 1986ರಲ್ಲಿ 'ಸಂಚಿಕೆ' ವಾರಪತ್ರಿಕೆಯನ್ನು ಶುರು ಮಾಡಿದೆವು. ಕೋಲಾರದಲ್ಲಿ ಮೊದಲ ಬಾರಿಗೆ ಆಫ್‌ಸೆಟ್ ಮುದ್ರಣದಲ್ಲಿ ಪತ್ರಿಕೆ ತಂದಿದ್ದೇ ನಾವು. ಆಯಾ ವಾರಕ್ಕೆ ಬೇಕಾದ ಹಣವನ್ನು ಆಯಾ ವಾರವೇ ಹೊಂಚಿಕೊಂಡು ಪತ್ರಿಕೆ ಹೊರತರುತ್ತಿದ್ದೆವು. ಅನೇಕ ಉದ್ಯಮಿಗಳು, ರಾಜಕಾರಣಿಗಳು, ಪ್ರಭಾವಿಗಳು ಆ ಪತ್ರಿಕೆಯನ್ನು ಬಿಟ್ಟುಕೊಡುವಂತೆ ಒತ್ತಾಯ ಮಾಡಿದರೂ ಪತ್ರಿಕೆಯ ಸ್ವರೂಪ ಹಾಗೂ ಸತ್ವ ಹಾಳಾಗುತ್ತೆ ಎಂದು ನಾವು ಅದಕ್ಕೆ ಸಮ್ಮತಿಸಲಿಲ್ಲ. ಆದರೆ, ಹಣಕಾಸಿನ ಮುಗ್ಗಟ್ಟಿನಿಂದ ಕೇವಲ ಒಂದು ವರ್ಷ ಮಾತ್ರ ಪತ್ರಿಕೆ ತರಲು ನಮಗೆ ಸಾಧ್ಯವಾಯಿತು.

◆ **ನಿಮ್ಮ ಸಂಶೋಧನೆಗಳ ಪೈಕಿ 'ಮಾಸ್ತೀಕರ ಸಂಸ್ಕೃತಿ' ಅಧ್ಯಯನದ ನಂತರ 'ಆಜೀವಿಕ ಧರ್ಮ'ದ ಬಗ್ಗೆ ನೀವು ನಡೆಸಿದ ಹುಡುಕಾಟ ಹಾಗೂ ಆ ಬಗ್ಗೆ ಬರೆದ 'ದಕ್ಷಿಣ ದಂಡಾಜೀವಿಕ' ಕೃತಿ ಮುಖ್ಯವಾದವು. ನೀವು ಕಂಡುಕೊಂಡಂತೆ ಆಜೀವಿಕ ಧರ್ಮ ಇತರೆ ಧರ್ಮಗಳಂತೆ ನೆಲೆ ನಿಲ್ಲದೇ ಅಂತರ್ಧಾನವಾಗಿದ್ದು ಯಾಕೆ?**

ಆಗೆಲ್ಲ ನಾವು ಸಮಾನ ಮನಸ್ಕರು ಒಂದೆಡೆ ಸೇರಿದರೆ ಬಯಲು ಸೀಮೆಯ ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಿನ್ನೆಲೆಗಳ ಬಗ್ಗೆ ಚರ್ಚೆ ಮಾಡುವುದು ಕಾಮನ್ ಆಗಿತ್ತು. ಈಗ ಕೋಲಾರಮ್ಮ ದೇವಸ್ಥಾನವಿದೆಯಲ್ಲ, ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾದ ಪ್ರಕಾರ, ಅದು ಸಾವಿರ ವರ್ಷಗಳ ಇತಿಹಾಸವಿರುವ ದೇವಾಲಯ. ಅಲ್ಲಿನ ದೇವಿಯ ಉಗ್ರ ರೂಪ, ದೇವಸ್ಥಾನದ ವಿನ್ಯಾಸ ಇತ್ಯಾದಿ ನೋಡಿದರೆ ಅದೊಂದು ಶಾಕ್ತಪಂಥದ ಕೇಂದ್ರವಾಗಿತ್ತು ಎನ್ನುವುದನ್ನು ಯಾರು ಬೇಕಾದರೂ ಹೇಳಬಹುದು. ಅದುವರೆಗೆ ಜನ ದೇವಾಲಯದ ಬಗ್ಗೆ ಏನು ಅಂದುಕೊಂಡಿದ್ದರೋ ಅದಕ್ಕಿಂತ ಭಿನ್ನವಾದ ಪಾಂಥಿಕ ಹಿನ್ನೆಲೆ ಇದೆ ಎಂದು ಅನ್ನಿಸಿ ಆ ಬಗ್ಗೆ ಶೋಧನೆ ಮಾಡತೊಡಗಿದೆ. ಜಿಲ್ಲೆಯ ಬೇರೆ ಬೇರೆ ಸಂಸ್ಕೃತಿ ನೆಲೆಗಳ ಕುರಿತು ಗಂಭೀರವಾಗಿ ಯೋಚಿಸತೊಡಗಿದೆ. ಆಜೀವಿಕ ಧರ್ಮ ನನ್ನ ತಲೆಯೊಳಗೆ ಪ್ರವೇಶಿಸಿದ್ದೇ ಆ ಹಂತದಲ್ಲಿ. ಅದರ ಬಗ್ಗೆ ಕುತೂಹಲ ಕೆರಳಿ ಹುಡುಕಾಟ ಮಾಡತೊಡಗಿದೆ. ಆಜೀವಿಕ ಧರ್ಮದ ಮಕ್ಕಲಿ ಗೋಸಾಲ, ಬುದ್ಧನಿಗಿಂತ ಸೀನಿಯರ್ ಆಗಿದ್ದ; ಬುದ್ಧನಿಗೇ ಎರಡು ವರ್ಷ ಗುರುವಾಗಿದ್ದ. ಆರು ವರ್ಷ ಮಹಾವೀರನ ಒಡನಾಡಿಯಾಗಿದ್ದ. ಮೂಲತಃ ಮಕ್ಕಲಿ ಗೋಸಾಲ ಒಬ್ಬ ಗುಲಾಮ. ಗುಲಾಮನಾಗಿದ್ದ ಗೋಸಾಲ ಯಜಮಾನನ ಕಾಟ ತಡೆಯಲಾಗದೇ ಕಾಡಿಗೆ ಓಡಿಹೋಗಿ, ಅಲ್ಲಿದ್ದ ಬೇರೆ ಬೇರೆ ಪಂಥಗಳವರ ಜೊತೆ ಸೇರಿಕೊಂಡು ಅವರೊಂದಿಗೆ ತಾತ್ವಿಕ ಹಾಗೂ ಧಾರ್ಮಿಕ ಅನುಸಂಧಾನ ನಡೆಸಿದ. ಆಗ ರಾಯಲ್